ಸಿಂಧನೂರು ಕ್ಷೇತ್ರದಲ್ಲಿ ಸರ್ಕಾರಿ ಪ್ರೌಢಶಾಲೆ ಹಾಗೂ ಟಿ.ಸಿ.ಎಚ್ ತರಬೇತಿ ಕೇಂದ್ರಗಳ ಮಂಜೂರಾತಿ

2541 (2918) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) 2001-02 ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ಉದೇಶ ಸರ್ಕಾರಕ್ಕೆ ಇದೆಯಾ; ಹಾಗಿದ್ದಲ್ಲಿ ಸಿಂಧನೂರು ಕ್ಷೇತ್ರದ ರಾಗಲಪರ್ವಿ ಗ್ರಾಮ ಗಿಡ್ಡಿಗಿ ಗ್ರಾಮ, ಬೂದಿಹಾಳ್ ಕ್ಯಾಂಪ್ ಈ ಗ್ರಾಮಗಳಿಗೆ ಸರ್ಕಾರಿ ಪ್ರೌಢಶಾಲೆ ಮಂಜೂರು ಮಾಡಲು ಇಲಾಖೆಯಿಂದ ಪ್ರಸ್ತಾವನೆ ಬಂದಿದೆಯೆ;

2) ರಾಜ್ಯದಲ್ಲಿ ಟಿ.ಸಿ.ಎಚ್ ಟಿ.ಸಿ.ಎಚ್ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೆ; ಇದ್ದಲ್ಲಿ ಪ್ರಸ್ತಾವನೆಗಳು ಯಾವ ಯಾವ ಜಿಲ್ಲೆಯಲ್ಲಿ ಬಂದಿವೆ; ಮಂಜೂರು ಮಾಡಲು ಹಾಕಿರುವ ಮಾನದಂಡವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1) ಹೌದು.
ಪ್ರಸ್ತಾವನೆ ಬಂದಿಲ್ಲ

2) ಇದೆ. ಬಹುತೇಕ ಜಿಲ್ಲೆಗಳಿಂದ ಪ್ರಸ್ತಾವನೆ ಬಂದಿದ್ದು ಶಿಕ್ಷಕ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸುವ ಬಗ್ಗೆ ಮಾರ್ಗ ಸೂಚಿಗಳನ್ನು ರೂಪಿಸಲಾಗುತ್ತಿದೆ.

ಹಾಸನ ವಿಧಾನಸಭಾ ಕ್ಷೇತ್ರದ ಶಾಲಾ ಕಟ್ಟಡಗಳ ದುರಸ್ತಿ

2542 (2921) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಹಾಸನ ವಿಧಾನಸಭಾ ಕ್ಷೇತ್ರದ ಕಸಬಾ, ಕಟ್ಟಾಯ, ಶಾಂತಿಗ್ರಾಮ ಹೋಬಳಿಗಳಲ್ಲಿ ಕಳೆದ ವರ್ಷದ ಅತಿವೃಷ್ಟಿಯಿಂದ ಎಷ್ಟು ಶಾಲಾ ಕಟ್ಟಡಗಳು ಜಖಂ ಆಗಿವೆ; ವಿವರ ನೀಡುವುದು;

(ಆ) ಇಂತಹ ಕಟ್ಟಡಗಳಲ್ಲಿ ಮಕ್ಕಳು ವಿದ್ಯಾಭ್ಯಾಸವನ್ನು ಮಾಡುವುದು ಅಪಾಯಕಾರಿ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಇಂತಹ ಕಟ್ಟಡಗಳನ್ನು ಆದ್ಯತೆ ಮೇರೆಗೆ ದುರಸ್ತಿ ಮಾಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

(ಅ) ಹಾಸನ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಅತೀವೃಷ್ಟಿಯಿಂದ ಜಖಂ ಆದ ಶಾಲಾ ಕಟ್ಟಡಗಳು ಯಾವುದು ಇರುವುದಿಲ್ಲ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಇಂತಹ ಯಾವುದೇ ಪ್ರಕರಣ ಇರುವುದಿಲ್ಲ.

ಹಾಸನ ತಾಲ್ಲೂಕಿನಲ್ಲಿ ಕೆರೆಗಳ ದುರಸ್ತಿ

2543(2922) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ವರ್ಷದ ಅತಿವೃಷ್ಟಿಯಿಂದ ಹಾಸನ ವಿಧಾನ ಸಭಾ ಕ್ಷೇತ್ರದ ಕಸಬಾ ಕಟ್ಟಾಯ ಶಾಂತಿಗ್ರಾಮ ಹೋಬಳಿಗಳಲ್ಲಿ ನೂರು ಎಕರೆಗೂ ಕಡಿಮೆ ಅಚ್ಚುಕಟ್ಟು ಇರುವ ಹಾಗೂ ಹಾಸನ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಸೇರಿದ 100ಕ್ಕೂ ಮೇಲ್ಪಟ್ಟ ಕೆರೆಗಳು ಒಡೆದು ಹೋಗಿರುವುದು ನಿಜವಲ್ಲವೇ;

ಆ) ಅವುಗಳ ಪೈಕಿ ಸುಮಾರು 60 ಕೆರೆಗಳನ್ನು ಹಾಸನ ಜಿಲ್ಲಾ ಪಂಚಾಯತ್ ರಿಪೇರಿ ಮಾಡಿ ರೈತರಿಗೆ ಅನುಕೂಲ ಕಲ್ಪಿಸಿಕೊಟ್ಟಿರುವುದು ನಿಜವಲ್ಲವೇ;

ಇ) ಕಳೆದ ವರ್ಷದ ಮಳೆಯಲ್ಲಿ ಒಡೆದು ಹೋಗಿರುವ ಕೆರೆಗಳ ಪೈಕಿ ಇನ್ನಷ್ಟು ಕೆರೆಗಳು ರಿಪೇರಿಯಾಗಬೇಕಾಗಿರುವುದು ನಿಜವಲ್ಲವೇ;

ಈ) ಈ ಕೆರೆಗಳ ರಿಪೇರಿಗೆ 15 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ ತಕ್ಷಣ ರಿಪೇರಿ ಮಾಡಲು ಆದೇಶಿಸಿರುವುದು ನಿಜವಲ್ಲವೇ;

ಉ) ರೈತರ ಹಿತದೃಷ್ಟಿಯಿಂದ ಈ ಕೆರೆಗಳನ್ನು ತಕ್ಷಣ ದುರಸ್ತಿಮಾಡಿ ಈ ವರ್ಷ ಬೆಳೆ ಬೆಳೆಯಲು ಹಾಸನ ಜಿಲ್ಲಾ ಪಂಚಾಯತ್‌ರವರು ಕಲ್ಪಿಸಿಕೊಡುವರೆ?